ಜಪ್ಪಿಕೊಂಡೆ. ನನ್ನ ತಲೆಬುರುಡೆಯ ಮೇಲೆ ಈಗಲೂ ಆ ಗಾಯದ ಗುರುತುಗಳಿವೆ. ಒಂದೇ ಸಮನೆ ಅತ್ತು ಅತ್ತು ಮೂರ್ಛೆ ಹೋದಾಗ, ಸುತ್ತ ಇದ್ದ ಜನರು ನನ್ನನ್ನು ಹಾಸಿಗೆಯ ಮೇಲೆ ಮಲಗಿಸಿದರು. ಜನರು ಅಕ್ಕನಿಗೆ ಸ್ನಾನಮಾಡಿಸಿ, ಬಿಳಿಯಬಟ್ಟೆಯ ಹೊದಿಕೆಯಲ್ಲಿ ಅವಳ ದೇಹವನ್ನು ಮರೆಮಾಡಿ, ಅದನ್ನು ಹೂತುಬಿಡಲೆಂದು ಕಾಯುತ್ತಿದ್ದಾಗ ಸಾವಿನ ನಿಜವಾದ ಅರ್ಥ ನಿಧಾನಕ್ಕೆ ನನ್ನೊಳಗೆ ಮೂಡತೊಡಗಿತು.

ವಾಸ್ತವವಾಗಿ ಗುಣಾ ನನ್ನ ಸ್ವಂತ ಅಕ್ಕ. ನನ್ನ ತಾಯಿಯ ಮಗು, ನನ್ನ ತಂದೆಯ ಮಗಳು. ನಾನು ಭಾವಿಸಿದ್ದಂತೆ ಅವಳು ನನ್ನ ಸಂಬಂಧಿಯಲ್ಲ. ಈ ವಿಷಯ ತಿಳಿದ ಮೇಲೆ ನನ್ನ ದುಃಖ ಇನ್ನಷ್ಟು ಜಾಸ್ತಿಯಾಯಿತು. ಮಾತುಗಳಲ್ಲಿ ಹೇಳಲಾಗದ ಯಾವುದೋ ಒಂದು, ನನ್ನನ್ನು ಅವಳ ಸಾವಿನ ಕಾರಣಕ್ಕಿಂತ ಹೆಚ್ಚಾಗಿ ಪೀಡಿಸಿತು. ಈಗಲೂ ನಾನು ಆ ಎದೆ ಬಿರಿಯುವ ದುಃಖವನ್ನು ಮರೆಯಲಾರೆ. ಅವಳನ್ನು ಎರಡು ಅಡಕೆ, ಒಂದು ಎಲೆ ಮತ್ತು ಕಾಲು ರೂಪಾಯಿ ಬೆಲೆ ಪಡೆದು ಚಿಕ್ಕಪ್ಪನಿಗೆ ಮಾರಿದ್ದರು ಎಂಬ ವಿಷಯವು ನನಗೆ ಎಷ್ಟೋ ವರ್ಷಗಳ ಬಳಿಕ ಗೊತ್ತಾಯಿತು. ಹೀಗೆ ಮಾಡುವುದರಿಂದ ರೋಗಗಳಿಂದ ಬಿಡುಗಡೆ ಸಿಗುವುದೆಂಬುದು ನಮ್ಮ ಕುಟುಂಬದ ಪಾರಂಪರಿಕ ನಂಬಿಕೆ. ಆದ್ದರಿಂದಲೇ ನಮ್ಮ ಕುಟುಂಬಗಳ ಪ್ರತಿಯೊಂದು ಮಗುವನ್ನೂ ಆರೋಗ್ಯ ಮತ್ತು ಸಂತೋಷಗಳ ನಿರೀಕ್ಷೆಯಿಂದ ಬೇರೆ ಯಾರಿಗೋ ಮಾರುತ್ತಿದ್ದರು. ಹೀಗೆ ಮಕ್ಕಳನ್ನು ಪಡೆದುಕೊಂಡ ಕುಟುಂಬಗಳ ಮನೆಗೆ 'ಬಿಹು' ಮುಂತಾದ ಹಬ್ಬಗಳ ದಿನ ಭೇಟಿ ನೀಡುವುದು ಸಂಪ್ರದಾಯ. ಆ ಭೇಟಿಗಳಲ್ಲಿ, ಒಂದು ಚೀಲದ ತುಂಬ ಅಡಕೆ. ವೀಳ್ಯದೆಲೆ, ತಿಂಡಿ-ತೀರ್ಥ ಮತ್ತು ಅಪಾಂಗ್ ಪಾನೀಯಗಳನ್ನು ತೆಗೆದುಕೊಂಡು ಹೋಗುತ್ತಿದ್ದೆವು. ಆ ಕುಟುಂಬದವರ ಪಾದಗಳಿಗೆ ಗೌರವದಿಂದ ನಮಸ್ಕರಿಸುವುದು ನಮ್ಮ ಕರ್ತವ್ಯವಾಗಿತ್ತು.

4

ಕಳಿತ ಅಂಜೂರವು ನಮ್ಮ ಬಾಲ್ಯದ ದಿನಗಳ ಇಷ್ಟದ ಹಣ್ಣಾಗಿತ್ತು. ನಾವು ಗುಂಪುಗುಂಪಾಗಿ ಅವುಗಳನ್ನು ಹುಡುಕಿಕೊಂಡು ತಿರುಗುತ್ತಿದ್ದೆವು. ಅದಕ್ಕಾಗಿ ಕಷ್ಟಪಡುವ ಅಗತ್ಯವೇ ಇರಲಿಲ್ಲ. ಆ ಹಣ್ಣುಗಳು ಕೈಗೆ ಸಿಗುವಷ್ಟು ಎತ್ತರದಲ್ಲಿ ಗೊಂಚಲಾಗಿ ಬೆಳೆಯುತ್ತಿದ್ದವು. ಆದರೆ ಬೊಂಬುಗಳಿಂದ ಸುತ್ತುವರಿದ ಅಂಜೂರದ ಮರದ ಕೆಳಗೆ ಅಕ್ಕನನ್ನು ಸಮಾಧಿ ಮಾಡಿದ ನಂತರ ನಾನು ಆ ಹಣ್ಣನ್ನು ತಿಂದಿಲ್ಲ. ಅವಳು ತೀರಿಕೊಂಡು ಒಂದೆರಡು ವರ್ಷಗಳಾದ ಮೇಲೆ, ಬಿದಿರುತೋಪಿನಿಂದ ಬಲಿತ ಕೆಲವು ಬೊಂಬುಗಳನ್ನು ಕತ್ತರಿಸಿ ತರಲೆಂದು ಕೂಲಿಯಾಳುಗಳ ಜೊತೆ ಹೋದಾಗ, ಅವಳ ಸಮಾಧಿ ನೋಡಿದೆ. ಆ ಮರದಿಂದ ಮಾಗಿದ ಹಣ್ಣುಗಳು ಕೆಳಗೆ ಬಿದ್ದಿದ್ದವು. ಅವು ಅವಳ ಸಮಾಧಿಯನ್ನು ನೆಲಹಾಸಿನಂತೆ ಆವರಿಸಿದ್ದವು. ತೆಳುಕೆಂಪು ಬಣ್ಣದ ಹಣ್ಣು ಬಿರಿದು ಹಣ್ಣಿನ ರಸ ಜಿನುಗುತ್ತಿತ್ತು. ಈ ನೋಟವು, ಸಾವಿನ ಹಾಸಿಗೆಯ ಮೇಲೆ ನರಳುತ್ತ ಮಲಗಿದ್ದ ಅಕ್ಕನ ಮುಖದ ನೆನಪನ್ನು ಮರುಕಳಿಸಿತು. ಹೊರಗೆ ಜಿನುಗುತ್ತಿದ್ದ ಹಣ್ಣಿನ ರಸವು ಅವಳ ಎಡಗಣ್ಣಿನಿಂದ ಒಸರುತ್ತಿದ್ದ ಕಂಬನಿ ಹನಿಗಳ ನೆನಪು ತಂದಿತು. ನನ್ನ ಗುಂಡಿಗೆಯ ಯಾವುದೋ ಅಜ್ಞಾತ ಆಳಗಳಿಂದ, ಕಳೆದ ದಿನಗಳ ತಣಿಸಲಾರದ ನೋವು ಚಿಮ್ಮಿ ಆಕ್ರಮಿಸಿತು. ನಾನು ಜೋರಾಗಿ ಅಳತೊಡಗಿದೆ. ಕೂಲಿಯ ಹುಡುಗ ಬೊಂಬುಗಳನ್ನು ಕಡಿಯುವ ಶಬ್ದದ ಲಯದೊಂದಿಗೆ ನನ್ನ ಆಕ್ರಂದನ ಜೊತೆಗೂಡಿತು. ಆ ಅಂಜೂರದ ಎಳೆಗಳು ಅಕ್ಕನ ಹೃದಯದ ಯಾತನೆ ಹೆಪ್ಪುಗಟ್ಟಿದ ಹಾಗೆ ಭಾಸವಾದವು. ಅವಳು ಅಂದು ಅಭಿವ್ಯಕ್ತಿ ಮಾಡಲು ಸಾಧ್ಯವಾಗದಿದ್ದ ನೋವು-ನರಳು ಈಗ ಕಟ್ಟೆಯೊಡೆದು ಹರಿದಂತೆ ತೋರಿತು. ಈಗಲೂ, ಮಳೆಗಾಲದ ದಿನಗಳಲ್ಲಿ, ನೀರಹರಿವುಗಳಲ್ಲಿ ತೇಲಿ ಹೋಗುವ ಮಾಗಿದ, ಮಾಗದ ಅಂಜೂರಗಳನ್ನು ನೋಡಿದಾಗ, ಅವು ಗೊತ್ತುಗುರಿಯಿರದೆ ತೇಲುತ್ತಿರುವ ಅವಳ ಕಣ್ಣುಗಳಂತೆ ಕಾಣುತ್ತವೆ.

ಅಕ್ಕನ ಸಾವಿನ ನೋವಿನಿಂದ ಚೇತರಿಸಿಕೊಂಡೇ ಇರಲಿಲ್ಲ, ಅಷ್ಟರಲ್ಲಿ ನನ್ನ ತಮ್ಮ ಭಾಭೇಶ್ ಸೂಕ್ತ ಸಮಯದಲ್ಲಿ ವೈದ್ಯಕೀಯ ನೆರವು ಸಿಗದೆ ತೀರಿಹೋದ. ನಮ್ಮ ಕುಟುಂಬವು ಮತ್ತೊಮ್ಮೆ ಸಾವಿನ ಭೀಕರ ಅನುಭವವನ್ನು ಎದುರಿಸಬೇಕಾಯಿತು. ಈಗಲೂ ನನ್ನ ಮನಸ್ಸು, ಸಾವಿನ ಭಯ ಮತ್ತು ಅದು ತರುವ ಕೊನೆಯಿರದ ದುಃಖದ ಕಡೆಗೆ ಮತ್ತೆ ಮತ್ತೆ ಹೊರಳುತ್ತದೆ.

●